# ಮನಸುಗಳು ಮುರಿದ ಮೇಲೆ ಮದುವೆ ಬಾಳೀತೆ?

ವೇಣುಗೋಪಾಲ್ ನಂಬಿಯಾರ್ ಚರ್ಮ ರೋಗ ಮತ್ತು ಚಿಕಿತ್ಸೆಯಲ್ಲಿ ಪ್ರಕಾಂಡ ವಿದ್ವಾಂಸರಾಗಿದ್ದರು. ಅವರು ಬೋಧನೆ ಮಾಡುವಾಗ, 'ಆಯಿಲ್ ಮಸಾಜ್‌ಗೆ ಆಯುರ್ವೇದದಲ್ಲಿ ಮಹತ್ವದ ಸ್ಥಾನವಿದೆ. ಶರೀರದ ಹೊರಗಿನ ಮತ್ತು ಕೆಳಗಿರುವ ಮಾಂಸಖಂಡಗಳು ಮತ್ತು ಕೆಲವು ಭಾಗಗಳನ್ನು ಒತ್ತುವುದು, ಅಲುಗಾಡಿಸುವುದು ಮುಂತಾದವುಗಳನ್ನು ಮಸಾಜ್ ಎನ್ನಲಾಗುತ್ತದೆ. ಇದರಿಂದ ಅವುಗಳ ಕಾರ್ಯವೆಸಗುವ ಸಾಮರ್ಥ್ಯ ಹೆಚ್ಚುವುದು, ಅವುಗಳ ಹಾಳಾದ ಭಾಗಗಳ ಸಮಸ್ಯೆ ನಿವಾರಣೆಯಾಗುತ್ತದೆ. ಇದರಿಂದ ಶರೀರಕ್ಕೆ ಆರಾಮ ಸಿಗುತ್ತದೆ, ಶರೀರ ಆರೋಗ್ಯವಾಗಿರುತ್ತದೆ. ಇದೊಂದು ಪುರಾತನ ಚಿಕಿತ್ಸೆಯಾಗಿದ್ದು, ಶರೀರದ ಬಿಗಿತವನ್ನು ಕಡಿಮೆ ಮಾಡಿ, ವಿಷದ ವಸ್ತುಗಳಿಂದ ಮುಕ್ತಿಯನ್ನು ಕೊಡುತ್ತದೆ. ಒಂದು ವಿಶೇಷ ಪ್ರಕ್ರಿಯೆಯಿಂದ ಬೇರು–ನಾರು ಮತ್ತು ಗಿಡಮೂಲಿಕೆಗಳಿಂದ ಸುವಾಸನೆಯುಕ್ತ ಎಣ್ಣೆಯನ್ನು ತೆಗೆದು ಶರೀರಕ್ಕೆ ಮಸಾಜು ಮಾಡಲಾಗುತ್ತದೆ' ಎಂಬ ಮಾಹಿತಿ ಲಭಿಸಿತು.

'ಅಭ್ಯಂಗ ಆಯುರ್ವೇದಿಕ್ ಆಯಿಲ್ ಮಸಾಜ್ ಪಾರ್ಲರ್' ವಾತಾವರಣ ನನಗೆ ತುಂಬಾ ಇಷ್ಟವಾಗುತ್ತಿತ್ತು. ನಾನು ಮಾನವನ ಶರೀರದ ರಚನೆಯನ್ನು ಅರಿಯುತ್ತಿದ್ದೆ. ಕೈ, ಕಾಲು, ಹೆಗಲು, ಸೊಂಟ, ಹೊಟ್ಟೆ, ಬೆನ್ನಿನ ಮೇಲ್ಭಾಗ ಮತ್ತು ತಲೆಗೆ ವಿಶೇಷ ಮಸಾಜು ಮಾಡುವುದು, ಪ್ರೆಶರ್ ಪಾಯಿಂಟ್ಸ್‌ಗಳನ್ನು ಒತ್ತುವುದರಿಂದ ಶಕ್ತಿ (ಪ್ರಾಣ) ಪ್ರವಾಹದಲ್ಲಿ ವೇಗ ಬರುವುದು ಹಾಗೂ ಶಕ್ತಿ ಇಡೀ ಶರೀರದಲ್ಲಿ ಹರಿಯುವುದು. ಎಲ್ಲವೂ ಕೈಗಳ ಚಲನೆಯನ್ನು ಅವಲಂಬಿಸಿದೆ. ಅಂದರೆ ಬೆರಳುಗಳ ನಡುವೆಯಿಂದ ಒತ್ತುವುದು, ಬೆರಳುಗಳು ಜಾರುವ ಮೂವ್‌ಮೆಂಟ್ಸ್, ಫಿಂಗರ್ ರೊಟೇಷನ್ ಇವುಗಳನ್ನು ಅವಲಂಬಿಸಿದೆ.

ನಾನು ತೈಲಗಳ ಮಹತ್ವವನ್ನು ಅರ್ಥ ಮಾಡಿಕೊಳ್ಳುತ್ತಿದ್ದೆ. ತೆಂಗಿನೆಣ್ಣೆ. ದ್ರಾಕ್ಷಿ ಬೀಜದ ತೈಲ, ಅಲಸೀ ತೈಲ, ಆಲಿವ್ ಎಣ್ಣೆ, ಬಾದಾಮಿ ಎಣ್ಣೆ, ಅಗಸೆ ಬೀಜದ ಎಣ್ಣೆ, ವಾಲನಟ್ ತೈಲ, ಬಾದಾಮಿ ತೈಲ, ಎಳ್ಳಿನ ಎಣ್ಣೆ ಮತ್ತು ಸಾಸಿವೆ ಎಣ್ಣೆ... ಪ್ರತಿಯೊಂದು ಎಣ್ಣೆಯಲ್ಲಿ ಭಿನ್ನ ಗುಣಗಳಿವೆ, ಹಾಗೂ ವಿಭಿನ್ನ ಪ್ರಯೋಜನಗಳಿಗೆ ಇವುಗಳನ್ನು ಬಳಸಲಾಗುತ್ತದೆ. ಹರ್ಬಲ್‌ನ ಬಿಸಿಬಿಸಿ ಎಣ್ಣೆಗಳ, ಬಿಸಿ ಮಿಶ್ರಣದ ಮಸಾಜಿನ ಉಪಯೋಗ ಒಂದು ವಿಶೇಷ ವಿಧಾನವಾಗಿದ್ದು, ಯೋಗ, ಧ್ಯಾನವನ್ನು ಒಳಗೊಳ್ಳುವುದರಿಂದ ಮಸಾಜಿನ ವ್ಯವಸಾಯದ ಮಟ್ಟ ಹೆಚ್ಚಿದೆ.

ನಾನು ಆಯಿಲ್ ಮಸಾಜಿನೊಂದಿಗೆ ಆಕ್ಯುಪ್ರೆಶರ್ ಮಸಾಜಿನ ತರಬೇತಿಯನ್ನೂ ಪಡೆದೆ. ಇದು ಮಾಂಸಖಂಡಗಳ ಬಿಗಿತವನ್ನು ದೂರ ಮಾಡಿ, ರಕ್ತ ಸಂಚಾರವನ್ನು ಸರಾಗಗೊಳಿಸುತ್ತದೆ. ಮಾನಸಿಕ ಒತ್ತಡ ಮತ್ತು ರಕ್ತನಾಳ ಬಿಗಿತವನ್ನು ಶಮನಗೊಳಿಸುವಲ್ಲಿ ಮಸಾಜು ಒಂದು ಉತ್ತಮ ಚಿಕಿತ್ಸೆಯಾಗಿದೆ.

ಕಾಲ ಕಳೆದದ್ದು ಗಮನಕ್ಕೆ ಬರುವುದಿಲ್ಲ. ನಾನು ಮಸಾಜಿನಲ್ಲಿ ಪಾಂಡಿತ್ಯವನ್ನು ಗಳಿಸಿದೆ. ಕೋರ್ಸ್ ಅವಧಿ ಪೂರ್ಣವಾದ ನಂತರ ನಿಯಮಾನುಸಾರ ಪರೀಕ್ಷೆ ನಡೆಯಿತು. ಅರ್ಧ ಗಂಟೆಯ ಥಿಯರಿ ಪೇಪರ್ ಅಂದರೆ ಮಲ್ಟಿಪಲ್ ಚಾಯ್ಸ್ ಪೇಪರ್ ಪರೀಕ್ಷೆ ನಡೆಯಿತು. ನಂತರ ಒಂದು ಗಂಟೆಯ ಪ್ರಾಕ್ಟಿಕಲ್ ಪರೀಕ್ಷೆ ನಡೆಯಿತು. ಪರೀಕ್ಷಾ ಶುಲ್ಕವನ್ನು ಪ್ರತ್ಯೇಕವಾಗಿ ಕೊಡಬೇಕಾಯಿತು. ಎರಡು ವರ್ಷಗಳು ಕಣ್ಣು ಮುಚ್ಚುವುದರಲ್ಲಿಯೇ ಕಳೆದುಹೋದವು.

ಕೊನೆಯ ದಿನದಂದು ವೇಣುಗೋಪಾಲ್ ನಂಬಿಯಾರರು ನನಗೆ ಬಾಡಿ ಮಸಾಜ್ ಡಿಪ್ಲೊಮೊ ಸರ್ಟಿಫಿಕೇಟನ್ನು ಕೊಡುತ್ತಾ ಹೇಳಿದರು,

